ಪೊಲೀಸ್ ಇಲಾಖೆ.

ತಾರೀಖು 8ನೇ ಮಾರ್ಚ್ 1887.

ಬಾಳೇ ಹೊನ್ನೂರು ಮತ್ತು ಯಡೆಹಳ್ಳಿ ಸ್ಟೇಷನುಗಳ ಸರಹದ್ದಿನ ವಳಗೆ ಯಿರತಕ್ಕ ಕಾಡಕೊಡಗಿ ಗ್ರಾಮದಲ್ಲಿನ ಚಂದಯ್ಯನ ಮನೆಯಿಂದ 1885ನೇ ಇಸವಿ ಮೇ 13ನೇ ತಾರೀಖಿನಲ್ಲಿ ಜೋರಿಯಿಂದ ವಯಸ್ಸಾಣಾದ ಸುಮಾರು 12 ವರುಷ ವಯಸ್ಸುಳ್ಳ ಗುತ್ತಿ, ಯಂಬ ಹುಡುಗಿಯ ಪತ್ತೇ ವಿಷಯದಲ್ಲಿ ಸಾಧಕವಾದ ವರ್ತಮಾನ ಕೊಡುವಂಥವರಿಗೆ 50 ರೂಪಾಯಿ ಇನಾಂ ಕೊಡಲ್ಪಡುತ್ತೆ.

ಯಲ್. ರಿಕ್ಕೆಟ್ಸ್,
ಪೊಲೀಸ್ ಇನ್ಸ್‌ಪೆಕ್ಟರ್ ಜನರಲ್.

ಫಾರೆಸ್ಟ್ ಇಲಾಖೆ.

ತಾರೀಖು 23ನೇ ಮಾರ್ಚ್ 1887.

ಇದರಿಂದ ಸರ್ವರತಿಳುವಳಿಕೆ ಬಗ್ಗೆ ಪ್ರಕಟಪಡಿಸುವದೇನಂದರೆ, ಶಿವಮೊಗ್ಗ ವ ಕಡೂರು ಡಿಸ್ಟ್ರಿಕ್ಟುಗಳ ಉತ್ಪತ್ತಿ ಬಾಬತು ಯಿಪ್ಪರಡೀ ಕಂಡ ಮರಗಳು ಫಾರೆಸ್ಟು ಅಸಿಸ್ಟೆಂಟ್ ಕಂಸರ್‌ವೇಟರವರಿಂದ ಆಯಾತಾರೀಖುಗಳಲ್ಲಿ ಬಹಿರಂಗವಾದ ಹರಾಜುಮೂಲಕ ವಿಕ್ರಯಿಸಲ್ಪಡುತ್ತೆ.

ಡಿಪೋ ಹೆಸರು.	ಹರಾಜ್ ತಾರೀಖು.	ತೇಗದನಾಟಾಗಳು.	ಕಾಡುಮರದ ನಾಟಾಗಳು.	ತೇಗದ ಮತ್ತು ಕಾಡುಜಾತಿ ಕೂಚಗಳು.	ಪರಾ.
ಸೊರಬ ತಾಲ್ಲೂಕು ತೆಲಗದ್ದೆ ..	2ನೇ ಮೇ 1887	100	..	..	ಹೆಚ್ಚು ಕಡಿಮೆಯಾಗಿ.
ಷಿಕಾರೀಪುರ ..	7ನೇ ಡಿಟೋ	..	100	350	
ತಾಳಕೊಪ್ಪ ..	8ನೇ ಡಿಟೋ	..	150	..	
ಚನ್ನಗಿರಿ ..	13ನೇ ಡಿಟೋ	25	10	300	
ಆಯಿನೂರು ..	22ನೇ ಡಿಟೋ	150	400	100	
ಶಿವಮೊಗ್ಗ ..	24ನೇ ಡಿಟೋ	180	100	300	
ಕೊಪ್ಪದ ತಾಲ್ಲೂಕು ಕಣಬೂರು ..	28ನೇ ಡಿಟೋ	..	300	..	
ತರೀಕೆರೆ ತಾಲ್ಲೂಕು ಲಕ್ಕುವಳ್ಳಿ .	1ನೇ ಜೂನ್ ಡಿಟೋ	2,200	400	600	

ಹರಾಜಿನ ಷರತ್ತುಗಳು—1873ನೇ ಇಸವಿ ಜೂನ್ 12ನೇ ಮತ್ತು 10ನೇ ನಂಬರ್ ಮೈಸೂರು ಗೆಜೆಟಿನಲ್ಲಿ ಘಾಯಿಷ್ಮಾಡಿಲ್ಪಟ್ಟ ಪ್ರಕಾರ ಯಿರತಕ್ಕವು, ಮತ್ತು ಹರಾಜ್‌ಕಾಲದಲ್ಲಿ ವೋದಲ್ಪಡುವದು.

ತಾರೀಖು 30ನೇ ಮಾರ್ಚ್ 1887.

ಇದರಿಂದ ಪ್ರಕಟಪಡಿಸುವದೇನಂದರೆ, ಮತ್ತೊಂದು ಹುಕುಂ ಕೊಡುವ ತರಿಯಂತ ಶಿವಮೊಗ್ಗ ಮತ್ತು ಕಡೂರು ಡಿಸ್ಟ್ರಿಕ್ಟುಗಳಲ್ಲಿಯ ಇದರಡೀ ಕಂಡ ಡಿಪೋಗಳಲ್ಲಿ ಮರಗಳ ಹರಾಜು ಸಾಲೀಯಾನಾ ಇದರಡೀ ನಮೂದಿರುವ ತಾರೀಖುಗಳಲ್ಲಿ ನಡಿಸಲ್ಪಡುವದು.